**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.208/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಗೌರಮ್ಮ | ಪ್ರಾಸಾ -4 |
| ಗಂಡನ ಹೆಸರು | : ವೀರೇಶ್ | ಚಾಸಾ-14 |
| ವಯಸ್ಸು | : 69 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 30.05.2025 |
| ವಾಸಸ್ಥಳ | : ಭದ್ರಾವತಿ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿಲ್ಲ. ಚಾಸಾ-1 ರಿಂದ 4 ಮತ್ತು 6 ರಿಂದ 10 ರವರ ಪರಿಚಯ ನನಗಿದೆ.

ದಿ.07.07.2023 ರಂದು ಭದ್ರಾವತಿಯಿಂದ ಸರ್ಕಾರಿ ಬಸ್ ನಲ್ಲಿ ಹೋಗುತ್ತಿರುವಾಗ ದಾರಿಯ ಮಧ್ಯದಲ್ಲಿ ಅಣ್ಣಪ್ಪ ಸ್ವಾಮಿಯ ದೇವಸ್ಥಾನದ ಬಳಿ ಎದುರಿನಿಂದ ಬಂದ ಸರ್ಕಾರಿ ಬಸ್ ನಾವು ಇದ್ದ ಬಸ್ ಗೆ ಡಿಕ್ಕಿ ಹೊಡೆಯಲಾಗಿರುತ್ತದೆ. ಆಗ ಸಮಯ ಮ.3.00 ಆಗಿರುತ್ತದೆ. ಆದ ಪರಿಣಾಮ ನನ್ನ ಎಡಗಾಲು, ಬಲಗಾಲು ಮತ್ತು ನನ್ನ ತಲೆಗೆ ಗಾಯವಾಗಿರುತ್ತದೆ. ನಂತರ ನನ್ನನ್ನು ಆಟೋ ಮಾಡಿ ಉಜಿರೆಯ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ಸದರಿ ಆಸ್ಪತ್ರೆಯ ಹೆಸರು ನನಗೆ ನೆನಪಿರುವುದಿಲ್ಲ. ನಂತರ ನಾನು ಚಿಕಿತ್ಸೆ ಪಡೆದು ಮನೆಗೆ ಹಿಂತಿರುಗುತ್ತೇನೆ. ಇದನ್ನು ಹೊರತುಪಡಿಸಿ ಇನ್ನ್ಯಾವುದೇ ವಿಚಾರ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ತಿಳಿದಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ದಿ.07.07.2023 ರಂದು ಬೆ.10.15 ರ ಸಮಯದಲ್ಲಿ ಚಾಸಾ-6 ರಿಂದ 9 ರವರೊಟ್ಟಿಗೆ ಬಸ್ ನಲ್ಲಿ ಭದ್ರಾವತಿಯಿಂದ ಧರ್ಮಸ್ಥಳಕ್ಕೆ KA-21-F-0215 ರ ಬಸ್ ನಲ್ಲಿ ಪ್ರಯಾಣಿಸುತ್ತಿದ್ದೆವು ಎಂದರೆ ಸರಿ. ಅದೇ ಸಮಯದಲ್ಲಿ ನಾವು ಕುಳಿತಿದ್ದ ಬಸ್ ನ ಚಾಲಕ ಅಜಾಗೃಕತೆ ಮತ್ತು ಅತೀ ವೇಗವಾಗಿ ಬಸ್ ನ್ನು ಚಲಾಯಿಸುತ್ತಿದ್ದರು ಎಂದರೆ ಸರಿ. ಅದರ ಪರಿಣಾಮ ಎದುರು ದಿಕ್ಕಿನಿಂದ್ದ ಬರುತ್ತಿದ್ದ KA-17-F-1901 ಬಸ್ ಗೆ ಡಿಕ್ಕಿ ಹೊಡೆಯಲಾಗಿರುತ್ತದೆ ಎಂದರೆ ಸರಿ. ಅದನ್ನು ನ್ಯಾಯಾಲಯದ ಮುಂದಿರುವ ಆರೋಪಿಯು ಚಲಾಯಿಸುತ್ತಿರುತ್ತಾರೆ ನನಗೆ ತಿಳಿದಿರುವುದಿಲ್ಲ. ಅದರ ಪರಿಣಾಮ ನನಗೆ ಗಾಯಗಳಾಗಿದ್ದು ಅಲ್ಲೇ ಇದ್ದ ಸಾರ್ವಜನಿಕರು ನನ್ನನು ಬೆನಕ ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ ಎಂದರೆ ಸರಿ. ಇದಕ್ಕೆ ಸಂಬಂಧಿಸಿದಂತೆ ಚಾಸಾ-1 ರವರು ದೂರನ್ನು ದಾಖಲಿಸಿರುವ ಬಗ್ಗೆ ತಿಳಿದಿರುತ್ತದೆ. ಆದ ಕಾರಣ

ನಾನು ವಯಸ್ಕಳಾದ ಕಾರಣ ಮತ್ತು ಅವಿದ್ಯಾವಂತೆಯಾದ ಕಾರಣ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸರಿಯಾದ ಸಾಕ್ಷ್ಯ ನುಡಿಯಲು ಸಾಧ್ಯವಾಗಿರುವುದಿಲ್ಲ ಎಂದರೆ ಸರಿ. ನಾನು ಪ್ರಯಾಣಿಸಿದ ಬಸ್ ನ ಫೋಟೋವನ್ನು ನೋಡಲಾಗಿ, ನನ್ನಿಂದ ಗುರುತಿಸಲಾಗಿರುವುದಿಲ್ಲ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ವಿ.ಜೆ ವಕೀಲರಿಂದಃ</u>**

ಸದರಿ ಪ್ರಕರಣದಲ್ಲಿ ನನಗೆ ಗಾಯವಾದ ಕುರಿತು ನಾನು ಯಾವುದೇ ದೂರನ್ನು ದಾಖಲಿಸಿರುವುದಿಲ್ಲ. ನಾನು ಆಸ್ಪತ್ರೆಯಿಂದ ಚಿಕಿತ್ಸೆ ಪಡೆದ ನಂತರ ಮನೆಗೆ ಹಿಂದಿರುಗಿರುತ್ತೇನೆ ಆದರೆ ಯಾವುದೇ ಪೋಲಿಸ್ ಠಾಣೆಗೆ ಹಾಜರಾಗಿರುವುದಿಲ್ಲ. ಚಾಸಾ-1 ರವರ ಪರಿಚಯ ನನಗಿರುವುದಿಲ್ಲ. ಘಟನೆ ನಡೆದ ಸ್ಥಳದಲ್ಲಿ ನಾವು ಇದ್ದ ಬಸ್ ನ ಎಡಭಾಗದಲ್ಲಿ ದೊಡ್ಡ ಪ್ರಪಾತ ಇರುತ್ತದೆ ಎಂದರೆ ಸರಿ. ಆ ದಿನ ನಾನು ಪ್ರಯಾಣಿಸುತ್ತಿದ್ದ ಬಸ್ ನ ಚಾಲಕ ಸ್ವಲ್ಪವಾದರೂ ಎಡಕ್ಕೆ ವಾಹನವನ್ನು ಚಲಾಯಿಸಿದ್ದಲ್ಲಿ ಬಸ್ ನಲ್ಲಿ ಇದ್ದ ಪ್ರಯಾಣಿಕರು ಪ್ರಪಾತಕ್ಕೆ ಬಿದ್ದು ಸಾವನ್ನಪ್ಪುತ್ತಿದ್ದರು ಎಂದರೆ ಸರಿ. ನಿಡಿ-1 ನ್ನು ಸಾಕ್ಷಿಗೆ ತೋರಿಸಿದ್ದು ಅದರಲ್ಲಿ ಕಾಣುವ ಬಸ್ ನಲ್ಲಿ ನಾವು ಬಸ್ ನಲ್ಲಿ ಭದ್ರಾವತಿಯಿಂದ ಧರ್ಮಸ್ಥಳಕ್ಕೆ ಪ್ರಯಾಣ ಮಾಡುತ್ತಿದ್ದೆವು ಎಂದು ಗುರುತಿಸಲಾಯಿತು. ನಿಡಿ-1 ಮತ್ತು 2 ನ್ನು ತೋರಿಸಲಾಗಿ ಅದರಲ್ಲಿ ನಾವು ಪ್ರಯಾಣಿಸುತ್ತಿದ್ದ ಬಸ್ ನ ಬಲಭಾಗಕ್ಕೆ ಇನ್ನೊಂದು ಬಸ್ ಹೋಗುವಷ್ಟು ಜಾಗ ಇದೆ ಎಂದರೆ ಸರಿ. ನಿಡಿ-2 ರಲ್ಲಿ ಕಾಣುವಂತೆ ನಾವು ಪ್ರಯಾಣಿಸುತ್ತಿದ್ದ ಬಸ್ ಗೆ ಎದುರು ದಿಕ್ಕಿನಿಂದ ಬಂದ ಬಸ್ ಡಿಕ್ಕಿ ಹೊಡೆದಿರುವುದು ಕಂಡು ಬರುತ್ತಿದೆ ಎಂದರೆ ಸರಿ. ಒಂದು ವೇಳೆ ಪೋಲಿಸರು ನನ್ನನು ವಿಚಾರಣೆಗೆ ಕರೆದಿದ್ದಲ್ಲಿ ನಾನು ಈ ಮೇಲೆ ಹೇಳಿದ ವಿಚಾರವನ್ನು ಅವರಿಗೆ ತಿಳಿಸುತ್ತಿದ್ದೆ ಎಂದರೆ ಸರಿ. ಸರ್ಕಾರಿ ಅಭಿಯೋಜಕರು ನನ್ನ ಪರ ವಕೀಲರು ಎಂದು ತಿಳಿದು ಅವರು ಕೇಳಿದ ಪ್ರಶ್ನೆಗೆ ಹೌದು ಎಂದು ಉತ್ತರಿಸಿರುತ್ತೇನೆ ಎಂದರೆ ಸರಿ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

<u>**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**</u>

<u>**ಸಿ.ಸಿ.208/2024**</u>

| | | |
|---|---|---|
| ಸಾಕ್ಷಿದಾರರ ಹೆಸರು | : ರುಕ್ಮಿಣಿ | ಪ್ರಾಸಾ -5 |
| ಗಂಡನ ಹೆಸರು | : ವೆಂಕಟೇಶ್ | ಚಾಸಾ-6 |
| ವಯಸ್ಸು | : 52 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯಾಪಾರ | ದಿನಾಂಕಃ 30.05.2025 |
| ವಾಸಸ್ಥಳ | : ಭದ್ರಾವತಿ | |

<u>**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**</u>

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿಲ್ಲ. ಚಾಸಾ-1 ರಿಂದ 4 ರವರ ಪರಿಚಯ ನನಗಿಲ್ಲ. ಚಾಸಾ-5, 7 ರಿಂದ 9 ರವರ ಪರಿಚಯ ನನಗಿದೆ.

ದಿ.07.07.2023 ರಂದು ಭದ್ರಾವತಿಯಿಂದ ಸರ್ಕಾರಿ ಬಸ್ ನಲ್ಲಿ ಹೋಗುತ್ತಿರುವಾಗ ಮೂಡಿಗೆರೆ ಇಂದ ಸ್ವಲ್ಪ ದೂರದ ದಾರಿಯ ಮಧ್ಯದಲ್ಲಿ ಎದುರಿನಿಂದ ಬಂದ ಸರ್ಕಾರಿ ಬಸ್, ನಾವು ಇದ್ದ ಬಸ್ ಗೆ ಡಿಕ್ಕಿ ಹೊಡೆಯಲಾಗಿರುತ್ತದೆ, ಸದರಿ ಬಸ್ ನ ಸಂಖ್ಯೆ ನನಗೆ ತಿಳಿದಿರುವುದಿಲ್ಲ. ಆಗ ಸಮಯ ಮ.3.15 ಆಗಿರುತ್ತದೆ. ಆದ ಪರಿಣಾಮ ನನ್ನ ಕುತ್ತಿಗೆಯ ಮೂಳೆ ಮತ್ತು ಬಲ ಭುಜ ಮತ್ತು ಎಡಗಾಲಿಗೆ ಗಾಯವಾಗಿರುತ್ತದೆ. ನಂತರ ಪ್ರಜ್ಞೆ ತಪ್ಪಿದ್ದ ನನ್ನನ್ನು ಜೀಪ್ ನಲ್ಲಿ ಮೂಡಿಗೆರೆಯ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕಳುಹಿಸಿರುತ್ತಾರೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಬೇರೊಂದು ಆಸ್ಪತ್ರೆಗೆ ಹೋಗಿರುತ್ತೇನೆ. ಸದರಿ ಆಸ್ಪತ್ರೆಯ ಹೆಸರು ನನಗೆ ನೆನಪಿರುವುದಿಲ್ಲ. ನಂತರ ಇನ್ನೂ ಹೆಚ್ಚಿನ ಚಿಕಿತ್ಸೆಗಾಗಿ ಮೀನಾ ನರ್ಸಿಂಗ್ ಹೋಮ್ ಗೆ ದಾಖಲಾಗಿರುತ್ತೇನೆ. ಇದನ್ನು ಹೊರತುಪಡಿಸಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ಯಾವುದೇ ವಿಚಾರ ನನಗೆ ತಿಳಿದಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

<u>**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**</u>

ನಾನು ಬಸ್ ನಲ್ಲಿ ಭದ್ರಾವತಿಯಿಂದ ಧರ್ಮಸ್ಥಳಕ್ಕೆ KA-21-F-0215 ರ ಬಸ್ ನಲ್ಲಿ ಪ್ರಯಾಣಿಸುತ್ತಿದ್ದೆವು ಎಂದರೆ ಸರಿ. ಅದೇ ಸಮಯದಲ್ಲಿ ನಾವು ಕುಳಿತಿದ್ದ ಬಸ್ ನ ಚಾಲಕ ಅಜಾಗ್ರತೆ ಮತ್ತು ಅತೀ ವೇಗವಾಗಿ ಬಸ್ ನ್ನು ಚಲಾಯಿಸುತ್ತಿದ್ದರು ಎಂದರೆ ಸರಿ. ಸದರಿ ಬಸ್ ನ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯು ಚಲಾಯಿಸುತ್ತಿದ್ದರು ನನಗೆ ತಿಳಿದಿರುವುದಿಲ್ಲ. ಎದುರು ದಿಕ್ಕಿನಿಂದ್ದ ಬಂದು ನಾವು ಪ್ರಯಾಣಿಸುತ್ತಿದ್ದ ಬಸ್ ಗೆ ಡಿಕ್ಕಿ ಹೊಡೆದ ಬಸ್ ನ ಸಂಖ್ಯೆ KA-17-F-1901 ಎಂದರೆ ನನಗೆ ತಿಳಿದಿರುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ಚಾಸಾ-1 ರವರು ದೂರನ್ನು ದಾಖಲಿಸಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ಆ ದಿನ ನನ್ನೊಡನೆ

ಇತರ ಪ್ರಯಾಣಿಕರಿಗೂ ಗಾಯಗಳು ಆಗಿರುತ್ತದೆ ಎಂದರೆ ಸರಿ. ಕೃತ್ಯಕ್ಕೊಳಗಾದ ಬಸ್ ನ್ನು ನೋಡಿ ಗುರುತಿಸಲು ಸಾಕ್ಷಿಯು ನಿರಾಕರಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ವಿ.ಜೆ ವಕೀಲರಿಂದಃ**

ನನಗೆ ಕನ್ನಡವನ್ನು ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ದೂರನ್ನು ದಾಖಲಿಸಿರುವುದಿಲ್ಲ. ಆ ದಿನ ನನ್ನೊಡನೆ ಮಕ್ಕಳೂ ಪ್ರಯಾಣಿಸುತ್ತಿದ್ದರು ಎಂದರೆ ಸರಿ. ನನ್ನ ಜೊತೆ ಇದ್ದ ಮಕ್ಕಳಿಗೂ ಸಣ್ಣ-ಪುಟ್ಟ ಗಾಯಗಳಾಗಿರುತ್ತದೆ ಅವರಿಗೂ ಸಹಾ ಚಿಕಿತ್ಸೆ ಕೊಡಿಸಲಾಗಿರುತ್ತದೆ. ನಾವು ಇದ್ದ ಬಸ್ ನ ಎಡಭಾಗದಲ್ಲಿ ದೊಡ್ಡ ಪ್ರಪಾತ ಇರುತ್ತದೆ ಎಂದರೆ ಸರಿ. ನಾವು ಚಲಾಯಿಸುತ್ತಿದ್ದ ಬಸ್ ಅತೀ ವೇಗದಿಂದ ಇದ್ದ ಕಾರಣ ಎದುರು ದಿಕ್ಕಿನಿಂದ ಬಂದ ಬಸ್ ಗೆ ಡಿಕ್ಕಿ ಹೊಡೆದಿರುತ್ತದೆ. ನಾವು ಚಲಾಯಿಸುತ್ತಿದ್ದ ಬಸ್ ಚಾಲಕರಿಗೆ ಸ್ವಲ್ಪ ನಿಧಾನವಾಗಿ ಚಲಾಯಿಸಲು ಯಾವುದೇ ರೀತಿಯಿಂದಾಗಿ ಮುಂಜಾಗ್ರತೆ ಕ್ರಮವನ್ನು ವಹಿಸಲು ತಿಳಸಿರುವುದಿಲ್ಲ. ಎರಡೂ ಬಸ್ ನ ಸಂಖ್ಯೆ ಯನ್ನು ಹೇಳಲು ಸಾಧ್ಯವಿಲ್ಲ. ಸದರಿ ಅಪಘಾತದ ಪರಿಣಾಮ ನಾನು ಪ್ರಜ್ಞೆ ತಪ್ಪಿರುತ್ತೇನೆ ಎಂದರೆ ಸರಿ. ನಂತರ ಚಿಕಿತ್ಸೆ ಕೊಡಿಸಿದ ನಂತರ ಪ್ರಜ್ಞೆ ಬಂದಿರುತ್ತದೆ ಎಂದರೆ ಸರಿ. ನನ್ನೊಡನೆ ಬಂದ ನನ್ನ ಕುಟುಂಬಸ್ತರೂ ಸಹಾ ಚಿಕಿತ್ಸೆಯನ್ನು ಪಡೆದು ಮನೆಗೆ ಹಿಂತಿಗಿರುತ್ತೇವೆ. ಸದರಿ ಜಾಗದ ಚೆಕ್ಕುಬಂದಿಯನ್ನು ಹೇಳಲು ಸಾಧ್ಯವಿರುವುದಿಲ್ಲ. ನಾನು ಪ್ರಯಾಣಿಸುತ್ತಿದ್ದ ಬಸ್ ಅತಿಯಾದ ಪ್ರಯಾಣಿಕರಿದ್ದರು. ಸದರಿ ಬಸ್ ನಲ್ಲಿ ಕೆಲವು ಪ್ರಯಾಣಿಕರು ನಿಂತು ಪ್ರಯಾಣಿಸುತ್ತಿದ್ದರು ಎಂದರೆ ಸರಿ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.